# ನಕ್ಕುಬಿಡಿ




ಗುಂಡ: ನಾನು ಅಮೆರಿಕಗೆ ಹೋಗಬೇಕು ಅಂತ ಯೋಚಿಸ್ತಿದ್ದೇನೆ....
ಪುಂಡ: ಹೌದಾ? ತುಂಬಾ ಹಣ ಬೇಕಾಗುತ್ತೆ ಅಲ್ವಾ?
ಗುಂಡ: ಇಲ್ಲ..... ಯೋಚನೆ ಮಾಡಲಿಕ್ಕೆ ಹಣ ಯಾಕೆ?

ಹೆಂಡತಿ: ರೀ, ನಾನು ನಿಮ್ಮನ್ನು ಬಿಟ್ಟು ದೂರ ಹೋದ್ರೆ ನೀವೇನ್ ಮಾಡ್ತಿರಾ?
ಗಂಡ: ಹಾಗೇನಾದ್ರು ಆದ್ರೆ, ಟೀವಿ ಮತ್ತು ಪೇಪರ್‌ನಲ್ಲಿ ಹಾಕಿಸ್ತೀನಿ.
ಹೆಂಡತಿ: ಏನಂತ ಹಾಕಿಸ್ತೀರಾ?
ಗಂಡ: ನೀನು ಎಲ್ಲೇ ಇರು, ಹೇಗೆ ಇರು, ಅಲ್ಲಿಯೇ ಇರು ಅಂತಾ!

ಹೆಂಡತಿ: ರೀ, ನಿಮಗೆ ರಾಣಿ ಅನ್ನೋ ಹೆಂಡ್ತಿ ಇರೋ ವಿಷಯ ನಮ್ಮ ಮದ್ವೆಗೆ ಮುಂಚೆ ಯಾಕ್ರೀ ಹೇಳ್ಲಿಲ್ಲ.
ಗಂಡ: ಹೇಳಿದ್ನಲ್ಲಾ ಚಿನ್ನ
ಹೆಂಡತಿ: ಯಾವಾಗ್ರೀ ಹೇಳಿದ್ರಿ
ಗಂಡ: ನಿನ್ನ ರಾಣಿ ತರ ನೋಡ್ಕೊಳ್ತೀನಿ ಅಂತ.

ಮೊದಲನೇ ಹುಚ್ಚ: ಲೋ ನೋಡ್ತಾ ಇರು ಸದ್ಯದಲ್ಲೇ ನಾನು ಭಾರತದ ಪ್ರಧಾನ ಮಂತ್ರಿ ಆಗ್ತೀನಿ.
ಎರಡನೇ ಹುಚ್ಚ: ಅದು ಸಾಧ್ಯವಿಲ್ಲ.
ಮೊದಲನೇ ಹುಚ್ಚ: ಏಕೆ ಸಾಧ್ಯವಿಲ್ಲ?
ಎರಡನೇ ಹುಚ್ಚ: ನಾನು ಆ ಸ್ಥಾನಕ್ಕೆ ರಾಜಿನಾಮೆ ನೀಡೋಕೆ ತಯಾರಿಲ್ಲ.

ಗುಂಡ: ನೋಡ್ಲೋ ಪಕ್ಕದ್ಮನೆ ಹುಡುಗೀನಾ? ಎಷ್ಟು ಜಾಣೆ ಇದ್ದಾಳೆ. ಈ ಬಾರಿ ಫಸ್ಟ್ ಕ್ಲಾಸ್‌ನಲ್ಲಿ ಪಾಸ್ ಆಗಿದ್ದಾಳಂತೆ. ನೀನು ಇದ್ದೀಯಾ ದಂಡಪಿಂಡ.
ಮರಿಗುಂಡ: ಸುಮ್ನಿರಪ್ಪ.
ಗುಂಡ: ಏನು ಸುಮ್ನಿರಪ್ಪ
ಮರಿಗುಂಡ: ಅವಳನ್ನು ನೋಡಿದ್ದಕ್ಕೆ ನಾನು ಫೇಲ್ ಆಗಿದ್ದು.

ಮರಿ ಗುಂಡ: ಅಪ್ಪಾ ನಾನು ದೊಡ್ಡವನಾದ ಮೇಲೆ ಡಾಕ್ಟರ್ ಆಗ್ತೇನೆ... ಅಪ್ಪ
ಗುಂಡ: ಅಷ್ಟೊಂದು ನಿಖರವಾಗಿ ಹೇಗೆ ಹೇಳ್ತಿಯಾ ನೀನು ಡಾಕ್ಟರ್ ಆಗ್ತೀನಿ ಅಂತ.
ಮರಿ ಗುಂಡ: ಹೇಗೆಂದರೆ, ಇಷ್ಟು ಚಿಕ್ಕ ವಯಸ್ಸಲ್ಲೇ ನಾನು ಬರೆದ ಅಕ್ಷರ ನನಗೇ ಅರ್ಥ ಆಗಲ್ಲಾ!

ಟೀಚರ್: ಯಾಕೋ ಗುಂಡ... ನಾನು ಪಾಠ ಶುರು ಮಾಡುವ ಮೊದಲೇ ಕೈ ಮುಗಿತಿದ್ದೀಯಾ?
ಗುಂಡ: ಟೀಚರ್... ನನ್ನ ಅಮ್ಮ ಮಲಗೋ ಮುಂಚೆ ದೇವರಿಗೆ ಕೈಮುಗಿ ಅಂತಾ ಹೇಳಿದ್ದಾರೆ!

ತಿಮ್ಮ: ಐ ಲವ್ ಯು
ತಿಮ್ಮಿ: ಐ ಲವ್ ಯು ಟೂ
ತಿಮ್ಮ: ಐ ಲವ್ ಯು ಟೂ ನಾ... ಮತ್ತೊಬ್ಬ ಯಾರೂ?

(ಸಂಗ್ರಹ) **ಪುರುಷೋತ್ತಮ್ ಎಂ.** ಚಿತ್ರದುರ್ಗ

